ಅಸಲು ದಾವಾ ಸಂಖ್ಯೆ. 184/2020

**ಪಿ.ಡಬ್ಲು. 1**

**ಸಾಕ್ಷಿಯನ್ನು ದಿನಾಂಕಃ 27.07.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ.ಎಸ್.ವಾಯ್ ಪ್ರತಿವಾದಿ ನಂ.1 ರ ಪರ ವಕೀಲರಿಂದ ಃ**

ಈ ದಾವೆ ಬಸಪ್ಪ ಇವನು ಕೃಷ್ಣಪ್ಪ ಇತನ ಮೇಲೆ ಜಾಗ ಸಲುವಾಗಿ ದಾಖಲಿಸಿರುತ್ತಾರೆ. ಯಾವ ಜಾಗ ಅದರ ನಂಬರ ಯಾವುದು ಎಂದು ನನಗೆ ಗೊತ್ತಿಲ್ಲ. ಈ ದಾವೆ ದಾಖಲಿಸುವ ಪೂರ್ವದಲ್ಲಿ ನನಗೂ ಮತ್ತು ಪ್ರತಿವಾದಿಗೂ ಯಾವುದೇ ಜಗಳವಾಗಿರಲಿಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ನನ್ನ ಜಾಗ ಅವನ ಜಾಗ ಎಂದು ನ್ಯಾಯಾ ಮಾಡುತ್ತಿದ್ದ. ಪ್ರತಿವಾದಿ ಆ ಜಾಗ ನಿನ್ನದು ಅಲ್ಲ ಅದು ನನ್ನ ಜಾಗ ಎಂದು ಹೇಳಿದ.

ದಾವಾ ಆಸ್ತಿಯ ಮಾಲಕ ನಾನೇ ಎಂದು ತೋರಿಸಲು ನಾನು ಉತಾರೆ ಮತ್ತು ತೆರಿಗೆ ರಶೀದಿಗಳನ್ನು ಸಲ್ಲಿಸಿರುತ್ತೇನೆ. ದಾವಾ ದಾಖಲಿಸುವ ಕಾಲಕ್ಕೆ ನಾನೇ ದಾವಾ ಆಸ್ತಿಯ ಕಬ್ಜಾವಹಿವಾಟಿಯಲ್ಲಿ ಇದ್ದೆ ಎಂದು ತೋರಿಸಲು ನ್ಯಾಯಾಲಕ್ಕೆ ದಾವಾ ಆಸ್ತಿಯ ಉತಾರೆ ಹಾಜರುಪಡಿಸಿದ್ದೇನೆ. ದಾವಾ ಆಸ್ತಿಗೆ ಪ್ರತಿವಾದಿ ಮಾಲಕನಿದ್ದು ಅವರೇ ಅವರ ಕಬ್ಜಾ ವಹಿವಾಟಿಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿ ಲಪಟಾಯಿಸುವ ಉದ್ದೇಶದಿಂದ ಆತನ ವಿರುದ್ಧ ಸುಳ್ಳು ದಾವಾ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ತೊಂದರೆ ಕೊಡಲು ಆತನ ವಿರುದ್ಧ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.2 ಏಕತರ್ಫಿ ಆಗಿದ್ದರಿಂದ ಅವರ ಪರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/.....

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ